


# ಫೀಚರ್ ಫೋನ್‌ನಲ್ಲಿ ಯುಪಿಐ ಸೇವೆ

■ **ಶಶಿಕುಮಾರ್ ಸಿ.**



ಆರು ವರ್ಷಗಳ ಹಿಂದೆ ಭಾರತದಲ್ಲಿ ವ್ಯಾಪಕವಾಗಿ ಜಾರಿಗೆ ಬಂದ ಏಕೀಕೃತ ಪಾವತಿ ವ್ಯವಸ್ಥೆಯು (ಯುಪಿಐ) ಸ್ಮಾರ್ಟ್‌ಫೋನ್ ಬಳಕೆದಾರರಿಗಷ್ಟೇ ಸೀಮಿತವಾಗಿತ್ತು. ಅದೇ ಸಮಯದಲ್ಲಿ ದೇಶದೆಲ್ಲೆಡೆಯ ಕೋಟ್ಯಂತರ ಮಂದಿ ಈ ಸೇವೆಯಿಂದ ವಂಚಿತರಾಗಿದ್ದರು. ಕಾರಣ, ಅವರೆಲ್ಲರೂ ಬಳಸುತ್ತಿದ್ದ ಫೀಚರ್ ಫೋನ್ (ಬೇಸಿಕ್ ಸೆಟ್–ಕೀಪ್ಯಾಡ್ ಸೆಟ್). ಇದನ್ನು ಗಂಭೀರವಾಗಿ ಪರಿಗಣಿಸಿದ 'ಭಾರತೀಯ ರಿಸರ್ವ್ ಬ್ಯಾಂಕ್' – ಫೀಚರ್ ಫೋನ್ ಬಳಕೆದಾರರಿಗೂ ಯುಪಿಐ 123 ಪೇ ಸೇವೆಯನ್ನು ಈಚೆಗೆ ಜಾರಿಗೊಳಿಸಿದೆ.

ಒಂದು ಅಂದಾಜಿನ ಪ್ರಕಾರ ದೇಶದಲ್ಲೆಡೆ ಫೀಚರ್ ಫೋನ್ ಬಳಸುವವರ ಸಂಖ್ಯೆ 40 ಕೋಟಿಗಿಂತಲೂ ಹೆಚ್ಚಿದೆ. ಈ ವರ್ಗವು ಯುಪಿಐ ಡಿಜಿಟಲ್ ಸೇವೆಯಿಂದ ವಂಚಿತವಾಗಿತ್ತು. ಯುಪಿಐ ವ್ಯವಸ್ಥೆಯನ್ನು ರೂಪಿಸಿರುವ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ), ಯುಎಸ್‌ಎಸ್‌ಡಿ ಆಧಾರಿತ ಯುಪಿಐ ವ್ಯವಸ್ಥೆಯನ್ನು ಫೀಚರ್ ಫೋನ್‌ಗಳಿಗೆ ಈಗಾಗಲೇ ನೀಡಿತ್ತು. ಆದರೆ, ಯುಎಸ್‌ಎಸ್‌ಡಿ ಮೂಲಕ ಇದನ್ನು ಬಳಕೆ ಮಾಡುವುದು ತ್ರಾಸದಾಯಕ ಕಾರ್ಯವೂ ಆಗಿತ್ತು. ಈ ಬಗ್ಗೆ ಫೀಚರ್ ಫೋನ್ ಬಳಕೆದಾರರು ಆಕ್ಷೇಪ ವ್ಯಕ್ತಪಡಿಸಿ ನಿಗಮಕ್ಕೆ ದೂರುಗಳನ್ನು ಸಲ್ಲಿಸಿದ್ದರು. ಹೀಗಾಗಿ ಬಳಕೆಯನ್ನು ಇನ್ನಷ್ಟು ಸಲೀಸಾಗಿಸುವ ನಿಟ್ಟಿನಲ್ಲಿ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಿದೆ.

ಕರೆ ಮಾಡುವಿಕೆ, ಆಯ್ಕೆ, ಪೇ ಎಂಬ ಮೂರು ಹಂತಗಳ ಮೂಲಕ ಯುಪಿಐ 123 ಪೇ ಸೇವೆಯನ್ನು ಪಡೆಯಬಹುದು. ಅದರ ವಿವರಣೆ ಇಂತಿದೆ: ಫೀಚರ್ ಫೋನ್ ಹಾಗೂ ಮೊಬೈಲ್ ಸಂಖ್ಯೆಯನ್ನು ನಿಮ್ಮ ಬ್ಯಾಂಕ್ ಖಾತೆಗಳಿಗೆ ಲಿಂಕ್ ಮಾಡಿರಬೇಕು. ಒಂದು ವೇಳೆ ಈ ಕಾರ್ಯವೂ ಪೂರ್ಣಗೊಳ್ಳದಿದ್ದರೆ ಫೀಚರ್ ಫೋನ್ ಮೂಲಕ ಹಣ ವರ್ಗಾವಣೆ ಸಾಧ್ಯವಿಲ್ಲ.

ಬ್ಯಾಂಕ್ ಖಾತೆಯೊಂದಿಗೆ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಿದ ಬಳಿಕ ಇಂಟರ್‌ಆ್ಯಕ್ಟಿವ್ ವಾಯ್ಸ್ ರೆಸ್ಪಾನ್ಸ್ (ಐವಿಆರ್) ಸಂಖ್ಯೆಗೆ ಕರೆ ಮಾಡಿ ಯುಪಿಐ ಪಾಸ್‌ವರ್ಡ್ ಸೆಟ್ ಮಾಡಿಕೊಳ್ಳಬೇಕು. ಈ ವಿಧಾನದಲ್ಲಿ ಬಳಕೆದಾರರ ಡೆಬಿಟ್ ಕಾರ್ಡ್ ಅತ್ಯಗತ್ಯ. ಇದಾದ ನಂತರ ಹಣ ವರ್ಗಾವಣೆ ಕಾರ್ಯವನ್ನು ಶುರು ಮಾಡಬಹುದು.

## ನಿರ್ವಹಣೆ ಹೇಗೆ?

ಯುಪಿಐ 123 ಪೇ ವ್ಯವಸ್ಥೆಯ ಮೂಲಕ ಹಣ ವರ್ಗಾವಣೆಗೆ ಐವಿಆರ್ ಸಂಖ್ಯೆಯನ್ನು ನೀಡಲಾಗಿದೆ. ಆ ಸಂಖ್ಯೆ 08045163666. ಗ್ರಾಹಕರೊಂದಿಗೆ ಸಂವಹನ ನಡೆಸಲಿರುವ ಈ ಸಂಖ್ಯೆಗೆ ಬಳಕೆದಾರರು ತಮ್ಮ ಫೀಚರ್ ಫೋನ್ ಮೂಲಕ ಕರೆ ಮಾಡಬೇಕು. ಪ್ರತಿಯಾಗಿ ಧ್ವನಿ ಸೂಚನೆಯು ಲಭ್ಯವಾಗುತ್ತದೆ.

ಧ್ವನಿ ಸೂಚನೆಯ ಅನ್ವಯ ಐವಿಆರ್ ಮೆನುವಿಗೆ ಹೋಗಿ, ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಬಳಿಕ ಯುಪಿಐನೊಂದಿಗೆ ಲಿಂಕ್ ಆದ ತಮ್ಮ ಬ್ಯಾಂಕ್ ಖಾತೆಯನ್ನು ಆಯ್ದುಕೊಳ್ಳಬೇಕು. ಧ್ವನಿ ಸೂಚನೆಯಂತೆ ಅಂಕಿಗಳನ್ನು ಒತ್ತಿದ ಬಳಿಕ ಯಾರಿಗೆ ಹಣ ವರ್ಗಾವಣೆ ಮಾಡಬೇಕಿದೆಯೋ ಅವರ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕು. ಆ ಮೊಬೈಲ್ ಸಂಖ್ಯೆಯು ಯಾವುದಾದರೊಂದು ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಆಗಿರಲೇಬೇಕು. ಮೊಬೈಲ್ ಸಂಖ್ಯೆ ಹಾಗೂ ಮೊತ್ತವನ್ನು ನಮೂದಿಸಬೇಕು. ಬಳಿಕ ಕನ್ಫರ್ಮ್ ಸೂಚನೆ ನೀಡಿ ಯುಪಿಐ ಪಿನ್ ಒತ್ತಿದರೆ ಹಣ ವರ್ಗಾವಣೆಯಾಗುತ್ತದೆ. ಆ ಸಂಬಂಧ ನಿಮ್ಮ ಮೊಬೈಲ್ ಸಂಖ್ಯೆಗೆ ಸಂದೇಶವೂ ರವಾನೆಯಾಗುತ್ತದೆ.

ಐವಿಆರ್ ಸಂಖ್ಯೆಗೆ ಕರೆ ಮಾಡುವಾಗಲೇ ಯಾರಿಗೆ ಹಣವನ್ನು ವರ್ಗಾವಣೆ ಮಾಡಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ಎಲ್‌ಪಿಜಿ ಗ್ಯಾಸ್, ಫಾಸ್ಟ್‌ಟ್ಯಾಗ್ ರೀಚಾರ್ಜ್, ಮೊಬೈಲ್ ರೀಚಾರ್ಜ್, ಬ್ಯಾಂಕ್ ಖಾತೆಗೂ ಹಣ ವರ್ಗಾವಣೆ ಮಾಡಬಹುದು. ಬ್ಯಾಂಕ್ ಖಾತೆಯಲ್ಲಿನ ಬ್ಯಾಲೆನ್ಸ್ ಪರಿಶೀಲನೆಯನ್ನೂ ಮಾಡಬಹುದು.

ಈ ಹಿಂದೆ 'ಈ ಸೌಲಭ್ಯವನ್ನು ಎಲ್ಲ ದೂರಸಂಪರ್ಕ ಕಂಪನಿಗಳು ಬಳಕೆದಾರರಿಗೆ ನೀಡಿರಲಿಲ್ಲ' ಎಂದು ಹೇಳಿದ್ದ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, 'ಯುಪಿಐ 123ಪೇ ಸೇವೆಯು ಇದುವರೆಗೆ ಡಿಜಿಟಲ್ ಪಾವತಿ ಜಗತ್ತಿನಿಂದ ಹೊರಗುಳಿದಿದ್ದವರಿಗೂ ಯುಪಿಐ ಸೌಲಭ್ಯವು ಇನ್ನು ಮುಂದೆ ಸಿಗಲಿದೆ' ಎಂದಿದ್ದಾರೆ.

ಐವಿಆರ್ ಸಂಖ್ಯೆಗೆ ಕರೆಮಾಡಿ, ಕೆಲವು ಫೀಚರ್ ಫೋನ್‌ಗಳಲ್ಲಿ ಇರುವ ಆ್ಯಪ್ ಬಳಸಿ ಅಥವಾ ಮಿಸ್ಡ್ ಕಾಲ್ ನೀಡಿ ಹಣ ಪಾವತಿಸಲು ಸಾಧ್ಯವಿದೆ ಎಂದಿದೆ ಆರ್‌ಬಿಐ. ಇದೇ ಸಂದರ್ಭದಲ್ಲಿ 'ಡಿಜಿಸಾಥಿ' ಹೆಸರಿನ ಸಹಾಯವಾಣಿಗೆ ಆರ್‌ಬಿಐ ಚಾಲನೆ ನೀಡಿದ್ದು, ಡಿಜಿಟಲ್ ಪಾವತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಇದರ ಮೂಲಕ ನೆರವು ಪಡೆಯಬಹುದು.

ವೆಬ್‌ಸೈಟ್ ವಿಳಾಸ: **www.digisaathi.info.**
ದೂರವಾಣಿ ಸಂಖ್ಯೆ: **14431** ಮತ್ತು **1800 891 3333.**